ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 164/2016
ಪಿ.ಡಬ್ಲ್ಯೂ ಃ 2

ದಿನಾಂಕಃ 11-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು ಃ **1** ನೇ ಪ್ರತಿವಾದಿ ಪರ ಶ್ರೀ ಪಿ ಎಸ್ ಆರ್ ವಕೀಲರಿಂದ

ನಾನು ಡಿಪ್ಲೋಮಾ ಪದವೀದರ. ನಾನು ಸಿವಿಲ್ ಇಂಜಿನಿಯರ್ ಮಾಡಿರುತ್ತೇನೆ. ನಾನು ಕೋಡಿಯಲ್ಲಿ ವಾಸ ಮಾಡುತ್ತಿದ್ದೇನೆ. ನಮ್ಮ ಮನೆಗೂ ದಾವಾ ಆಸ್ತಿಗೂ 200 ಮೀಟರ್ ಅಂತರವಿರುತ್ತದೆ. ದಾವಾ ಆಸ್ತಿ ಹಂಗ್ಲೂರು ಗ್ರಾಮದಲ್ಲಿದೆ. ವಾದಿಯರು ನನಗೆ ಚಿಕ್ಕಂದಿನಿಂದಲೂ ಪರಿಚಯ ಇರುತ್ತಾರೆ. ವಾದಿಗೆ ಮೂರು ಜನ ಮಕ್ಕಳಿರುತ್ತಾರೆ. ಎಲ್ಲರೂ ಬೆಂಗಳೂರಿನಲ್ಲಿ ವಾಸವಿರುತ್ತಾರೆ.

2. ಪಂಚಾಯತಿಯವರು ವಾದಿಯರ ಜಾಗವನ್ನು ಅತಿಕ್ರಮಣ ಮಾಡಲು ಬಂದಿದ್ದರು. ಹಾಗಾಗಿ ದಾವಾ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ಈ ಪ್ರಕರಣದಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಎ ಶೆಡ್ಯೂಲ್ ಎಂದು ನಮೂದಿಸಿದ್ದು, ಅದರ ಸರ್ವೆ ನಂಬ್ರ ನನಗೆ ಗೊತ್ತಿರುವುದಿಲ್ಲ. ಅದರ ವಿಸ್ತೀರ್ಣ ಅಂದಾಜು ಒಂದು ಮುಕ್ಕಾಲರಿಂದ ಎರಡು ಇರಬಹುದು. ನಾನು ದಾವಾ ಆಸ್ತಿಯ ಆರ್.ಟಿ.ಸಿ.,ಯನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಯ ಮನೆ, ಶೆಡ್ ದನದ ಕೊಟ್ಟಿಗೆ ಪಂಪ್ ಶೆಡ್ ತೆಂಗಿನ ಮರಗಳು ಹಾಗೂ ಇತರೇ ಮರಗಳು ಇರುತ್ತವೆ.

3. ಜಾಗದ ಮಧ್ಯದಲ್ಲಿ ಮನೆ ಇರುತ್ತದೆ. ಮನೆಗೆ ತಾಗಿ ದನದ ಕೊಟ್ಟಿಗೆ ಇರುತ್ತದೆ. ಮನೆಗೆ ತಾಗಿ ಪಂಪ್ ಶೆಡ್ ಇರುತ್ತದೆ. ದಾವಾ ಆಸ್ತಿಯ ಉತ್ತರಕ್ಕೆ ಶಿವಮೊಗ್ಗಕ್ಕೆ ಹೋಗುವ ದಾರಿ ಇರುತ್ತದೆ. ದಕ್ಷಿಣಕ್ಕೆ ಬಯಲು ಇರುತ್ತದೆ. ಪೂರ್ವಕ್ಕೆ ನೆರಬಳ್ಳಿಗೆ ಹೋಗುವ ದಾರಿ ಇರುತ್ತದೆ. ಪಶ್ಚಿಮಕ್ಕೆ ಹೊಳೆ ಇರುತ್ತದೆ. ನನಗೆ 2016 ರಲ್ಲಿ ಮಂಗಳೂರಿನ ಪಿ.ಡಿ.ಒ ರವರನ್ನು ನೋಡಿ ರುತ್ತೇನೆ, ಹೆಸರು ಗೊತ್ತಿರುವುದಿಲ್ಲ. ದಿನಾಂಕ 20-04-2016 ರ ಸಂಜೆ 5.30 ಗಂಟೆಗೆ ಪಿ.ಡಿ.ಒ.ರವರ ಜೊತೆ ಅವರ ಸ್ಟಾಫ್, ಪಂಚಾಯತಿ ಅಧ್ಯಕ್ಷರು ಹಾಗೂ ಸದಸ್ಯರು ಇದ್ದರು.

4. ಪಂಚಾಯತಿ ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ನಾನು ನೋಡಿರುತ್ತೇನೆ. ನಾನು ಅಲ್ಲಿಗೆ ಹೋಗುವಾಗಾಗಲೇ ಗಲಾಟೆ ಪ್ರಾರಂಭವಾಗಿತ್ತು. ಅಲ್ಲಿ ವಾದಿ, ಅವರ ಮಗ ಮತ್ತು ಹೆಂಡತಿ ಇದ್ದರು. ನಾನು ನನ್ನ ಮುಖ್ಯ ವಿಚಾರಣೆಯಲಲ್ಲಿ ವಾಟರ್ ಚಾನೆಲ್ ಅಂತ ಹೇಳಿರುವುದು ಹೊಳೆ ಇರುತ್ತದೆ. ಹೊಳೆ ಇರುವುದು ಯಾವ ಸರ್ವೆ ನಂಬ್ರ ಎಂದು ನನಗೆ ಗೊತ್ತಿರುವುದಿಲ್ಲ. ಹೊಳೆಗೆ ತಾಗಿ ಯಾವ ಸರ್ವೆ ನಂಬ್ರ  ಇರುತ್ತದೆ ಎಂದು ಗೊತ್ತಿರುವುದಿಲ್ಲ. ಹೊಳೆ ಎನ್ನುವುದು ಸಾರ್ವಜನಿಕರಿಗೆ ಸೇರಿದ ಸ್ವತ್ತು ಎಂದರೆ ಸರಿ.

5. ಎ ಶೆಡ್ಯೂಲ್ ಸ್ವತ್ತಿನಲ್ಲಿ 50-60 ತೆಂಗಿನ ಮರಗಳು ಇರಬಹುದು. ಯಾವ ಸರ್ವೆ ನಂಬ್ರದಲ್ಲಿ ಎಷ್ಟು ಮರಗಳು ಇರಬಹುದು ಎಂದು ಹೇಳಲು ಸಾಧ್ಯವಿಲ್ಲ. ತೆಂಗಿನ ಮರವನ್ನು ಬಿಟ್ಟು ಹತ್ತಿ ಮರ, ಇತರೇ ಮರಗಳು ಇದ್ದವು. ಹೊಳೆ ನೀರನ್ನು ಅಲ್ಲಿಗೆ ಬಿಡುತ್ತಾರೆ, ಬೇರೆ ಕಡೆಯಿಂದಲೂ ಸಹ ನೀರನ್ನು ತೆಗೆದುಕೊಳ್ಳುತ್ತಾರೆ. ನನಗೆ ದಾವಾ ಸರ್ವೆ ನಂಬ್ರ  ಹಾಗೂ ದಿನಾಂಕ 20-04-2016 ರ ವಿಚಾರದ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಈ ಸಂದರ್ಭದಲ್ಲಿ ಸಹಾಯಕ ಅಭಿಯೋಜಕರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ